"ಇಲ್ಲಿ ನಾವೆಲ್ಲ ನಿಂಗೆ ಒಳ್ಳೇದಾಗಲಿ ಅಂತಾನೆ ಬಯಸ್ತೀವಿ ಜುಂಪಾ, ನೀನೇ ಹೇಳು? ನಾನು ನಿನ್ನನ್ನ ಸ್ವಂತ ಮಗಳಂತೆ ಕಂಡಿದ್ದೇನಿ, ಯಾವತ್ತಾದರೂ ಬೇರೆಯವರ ತರ ನೋಡಿಕೊಂಡಿದಿನಾ? ಪೊಯ್ಲಾ ಬೈಶಾಖಿಗೆ (ಹೊಸ ವರ್ಷಕ್ಕೆ) ನನ್ನ ಸ್ವಂತ ಮಕ್ಕಳಿಗೆ ಬಟ್ಟೆ ತಂದಂತೆ ನಿನಗೂ ಬಟ್ಟೆ ತಂದುಕೊಟ್ಟಿಲ್ಲವಾ? ಹೇಳು? ನಿನಗೆ ಒಳ್ಳೇದಾಗಲಿ ಅಂತ ಅಂದುಕೊಳ್ಳದಿದ್ರೆ ಇದೆಲ್ಲ ನಿನಗೆ ಹೇಳಬೇಕಾಗಿತ್ತು ಯಾಕೆ?"

"ಒಂಚೂರು ಬೈಯ್ಯದೆ ಇರೋಕ್ಕಾಗುತ್ತಾ? ನಾನು ನನ್ನ ಮಕ್ಕಳಿಗೆ ಬೈಯ್ಯುವುದಿಲ್ಲವೇ? ನನ್ನ ಮಗಳಿಗೆ ಮದುವೆಯಾಗಿದೆ, ಆದರೂ ಸಂದರ್ಭ ಬಂದರೆ ಅವಳಿಗೂ ಬೈಯ್ತಿನಿ! ನೀನೂ ನೋಡಿದಿಯಾ! ನೋಡು ಚಂಪಾ, ನಾನು ನಿನ್ನನ್ನ ಕರೆಸಿಕೊಂಡಿದಿನಿ. ನೀನು, ನಿನ್ನ ಮಗಳನ್ನ ನನಗೆ ಒಪ್ಸಿ ಹೋಗಿದ್ದೆ. ಏನಾದ್ರೂ ಹೆಚ್ಚುಕಮ್ಮಿ ಆದ್ರೆ ನನ್ನ ತಾನೇ ನೀನು ಕೇಳೋದು! ನಾ ನಿನಗೆ ಹೇಳ್ತೀನಿ. ನಮ್ಮ ಪಾರ್ಲರ್‌ನ ಹುಡುಗೀರೆಲ್ಲ ಆ ಹುಡುಗನ ಜೊತೆ ಇರೋದನ್ನ ನೋಡಿದಾರೆ, ಅವರೆಲ್ಲ ಹೇಳಿದಾರೆ, 'ಆ ಹುಡುಗ ಸರಿಯಿಲ್ಲ' ಅಂತ. ನೀನೇ ಯೋಚ್ನೆ ಮಾಡು, ನಾನು ನಿನ್ನ ಬಗ್ಗೆನೆ ಚಿಂತೆ ಮಾಡ್ತಾಯಿದ್ದೆ. ನೀನು ಬಹಳ ಕಷ್ಟದಿಂದ ಇವಳನ್ನ ಬೆಳೆಸಿ ದೊಡ್ಡವಳನ್ನಾಗಿ ಮಾಡಿದ್ದಿ. ನಿನಗೆ ಇವಳು ಚೆನ್ನಾಗಿರೋದೆ ತಾನೇ ಬೇಕು. ತಿಂದುಂಡು, ಒಳ್ಳೇ ಬಟ್ಟೆಬರೆ ತೊಟ್ಟು ಇರಲಿ ಅಂತ ತಾನೆ ಬಯಸೋದು? ನಮ್ಮ ಮನೆಗೆ ಬಂದ ಮೇಲೆ ಏನಾದ್ರೂ ಕಷ್ಟ ಆಯ್ತಾ? ಕೇಳು, ಅವಳನ್ನ. ಈ ಹುಡುಗಿರೇ ಹೇಳ್ತಾರೆ, "ದೀದಿ, ಜುಂಪಾನ ಚಹರೇನೆ ಬದಲಾಗೋಗದೆ, ಅವಳ ಮೈ ಬಣ್ಣ..."

ಮಾತು ಮುಗಿಯುವ ಮೊದಲೇ ಚಂಪಾ ಮಾತಾಡಿದಳು, "ನನಗೆ ಕಾಣಿಸ್ತಾಯಿಲ್ವಾ ದೀದಿ? ನನಗೂ ಇವಳು ನಿಮ್ಮ ಹತ್ತಿರಾನೆ ಕೆಲಸ ಮಾಡಲಿ ಅಂತ ಆಸೆ. ಆದರೆ, ಇದಕ್ಕೆ ಇಲ್ಲಿರಕೆ ಇಷ್ಟ ಇಲ್ಲ! ಮೊದಲಿದ್ದ ಮನೇಲಿ ಅವರು ಇವಳನ್ನ ರಾತ್ರಿ ಹೊತ್ತು ಅಂಗಡಿಗೆ ಕಳಿಸ್ತಾಯಿದ್ರು ಅಂತ ನಾನು ಕೆಲಸ ಬಿಡಿಸಿಬಿಟ್ಟೆ."

"ನೀನೆ ಕೇಳು ಅವಳಿಗೆ, ಅಷ್ಟು ದಿನದಿಂದ ನಮ್ಮನೇಲಿ ಕೆಲಸ ಮಾಡ್ತಾವಳೆ, ನಾನು ಸಂಜೆ ಆದ ಮೇಲೆ ಅವಳನ್ನ ಎಲ್ಲಿಗಾದ್ರೂ ಕಳಿಸಿದೀನಾ ಅಂತ! ಆದ್ರೂ ಚಂಪಾ, ಒಂದು ಮಾತ ಹೇಳ್ತೀನಿ, ಅವಳಿಗೆ ಹೊರಗೆ ಸುತ್ತೋಕೆ ಇಷ್ಟ. ಹೊರಗಿರೋಕೆ ಆಸೆಪಡ್ತಾಳೆ!"

"ಆಂ, ಅವರು. ರಾತ್ರಿ ಹೊತ್ತು ಅಂಗಡಿಗೆ..."

"ಇಲ್ಲ ಇಲ್ಲ, ನಾನಂತೂ ನಿನ್ನ ಮಗಳನ್ನ ರಾತ್ರಿ ಹೊತ್ತು ಎಲ್ಲಿಗೂ ಕಳಿಸಿಲ್ಲ. ನೋಡ್ ಜುಂಪಾ, ನೀನು ಏನ್ ಮಾಡಿದಿಯೋ ಅದರ ಬಗ್ಗೆ ಇನ್ನೇನೂ ಹೆಚ್ಚಿಗೆ ಹೇಳ್ತಾಯಿಲ್ಲ. ನಮ್ಮನೇಲಿ ನಿನ್ನ ಎಷ್ಟು ಚೆನ್ನಾಗಿ ನೋಡ್ಕೊತಾಯಿದ್ವೋ ಹಾಗೇ ನೋಡ್ಕೊತೀವಿ. ಏನೋ ಒಂದು ತಪ್ಪ ಮಾಡಿದಿಯೇ, ವಯಸ್ಸು ಅಂಗೆ ಅದೆ. ಅದೆಲ್ಲ ಮರೆತುಬಿಡು. ಆಣೆಮಾಡಿ ಹೇಳು, ಇನ್ಮೇಲೆ ಹಿಂಗೆಲ್ಲ ಮಾಡೋದಿಲ್ಲ ಅಂತ. ಅಷ್ಟ ಸಾಕು."

ಎಷ್ಟೋ ಹೊತ್ತಿನ ನಂತರ ಅವಳ ಮಾತು ಕೇಳಿಸಿತು: "ನಾನು ನಿಮ್ಮನೇಲಿ ಕೆಲ್ಸ ಮಾಡೋದಿಲ್ಲ."

"ನೋಡ್ದಾ ಚಂಪಾ, ಎಂಥ ಹಟಮಾರಿ ಹೆಣ್ಣು. ಈ ಪಾರ್ಲರ್‌ನಲ್ಲಿರೋ ಹುಡುಗೀರನ್ನ ಕೇಳು, ಯಾರಾದ್ರೂ ನನ್ನ ಜೊತೆ, ಈ ತರ ಮಾತಾಡ್ತಾರಾ ಅಂತಾ? ಚೋಟುದ್ದ ಹುಡುಗಿ, ನಾವು ಚೆನ್ನಾಗಿ ನೋಡಿಕೊಂಡಿದಿವಿ. ಸ್ವಂತ ಮಗಳಂತೆ ಭಾವಿಸ್ಕೊಂಡಿದ್ದೆ. ಈಗ ನೋಡಿದ್ಯಾ? ಹೆಂಗೆ ನನ್ ಮುಖದ ಮೇಲೆ ಮಾತಾಡ್ತಳೆ? ನೀನ್ ಏನ್ ಹೇಳ್ತೀಯಾ? ನೋಡು ಜುಂಪಾ, ನೀನು ಹೋದರೆ ನಂಗೇನೂ ಕಷ್ಟ ಆಗಲ್ಲ ಅಂತ ನಾನು ಒಂದ್ಸಲನೂ ಹೇಳಿಲ್ಲ – ಹೇಳಿದಿನಾ? ಹಂಗಂತ ನೀನು ಈ ತರ ಮಾಡ್ಬೋದೆ? ನಿಮಗೆಲ್ಲ ಗೊತ್ತು, ಅವರಮ್ಮನಿಗೆ ಹೇಳ್ತೀ, ಅವಳು ಹೆಂಗೆ ನಂಗೆ ಕೆಲಸ ಬಿಡ್ತಿನಿ, ಕೆಲಸ ಬಿಡ್ತಿನಿ ಅಂತ ಹೆದರಿಸ್ತಾಳೆ ಅಂತ. ಯಾರಿಗ್ಗೊತ್ತಿಲ್ಲ, ಮೆತ್ತಗಿರೋರ ಕಂಡ್ರೆ ತಲೆ ಮೇಲೆ ಕೂತ್ಕೋತಾರೆ (ಬಗ್ಗಿದಷ್ಟು ಗುದ್ದು ಜಾಸ್ತಿ ಅಂತ) ಹೋಗಲಿ ಬಿಡು, ನಾನು ಈಗಲೂ ಹೇಳ್ತೀನಿ.